

ಸಂಸ್ಥೆಯ ವತಿಯಿಂದ ಮುದ್ದು ಕೃಷ್ಣ ಸ್ಪರ್ಧೆ ಆಯೋಜನೆ




ರೈಲಾ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆ




ಕಾರ್ಗಿಲ್ ವಿಜಯ ದಿವಸ ಆಚರಣೆ ಸನ್ಮಾನ ಕಾರ್ಯಕ್ರಮ




ರೋಟರಿ ಸಂಸ್ಥೆಯ ವಾರದ ಸಭೆ



ರೋಟರಿ ಸರ್ಕಲ್ ಉದ್ಘಾಟನಾ ಸಂದರ್ಭದಲ್ಲಿ ದಾನಿಗಳಿಗೆ ಸನ್ಮಾನ



ರೋಟರಿ ಬೋರ್ಡ ಸಭೆ



ರೋಟರಿ 'ಕೆಸರ್ದ ಗೊಬ್ಬು ಎಸಲ್ - 2'ಕಾರ್ಯಕ್ರಮದಲ್ಲಿ ನಡೆದ ಸನ್ಮಾನ ಕಾರ್ಯಕ್ರಮ




Rtn. Francesco Arezzo
R.I. President



Rtn. Palaksha K.
Dist. Governor

SERVICE ABOVE SELF

# SERVICE

THE OFFICIAL HOUSE BULLETIN OF

# ROTARY CLUB KARKALA

Rotary

UNITE FOR GOOD



Rtn. Naveenchandra Shetty
President



Rtn. Chethan Nayak
Secretary

ZONE- 5, R.I. DIST.3182   Club No. 15726   Charter Date : 09-03-1964.


**OFFICE BEARERS 2025-26**

President :
**Rtn. Naveenchandra Shetty**
Mob : 9448254344

Vice President :
**Rtn. Arun Kumar Shetty**
Mob : 9845207678

Immediate Past President :
**Rtn. Iqbal Ahmed**
Mob : 9880313852

Secretary :
**Rtn. Chethan Nayak**
Mob : 9880726811

Joint Secretary :
**Rtn. Shreesha Bhat**
Mob : 9986795950

Treasurer :
**Rtn. Harshini Vijayaraj**
Mob : 9880644905

Sargeant at arms :
**Rtn. Chethan Kumar**
Mob : 7349718605

**DIRECTORS**

President Elect :
**Rtn. K. Vijendra Kumar**
Mob : 9845232490/9611682681

Club Learning Facilitator :
**Rtn. Soujanya Upadhyaya**
Mob : 9845356244

Vocational Service :
**Rtn. Shailendra Rao**
Mob : 9845353475

Community Service :
**Rtn. Vasanth M.**
Mob : 9449166492

International Service :
**Rtn. Suresh Nayak K.S.**
Mob : 9980898080

New Generation & Youth Service :
**Rtn. Niranjan Jain**
Mob : 9972210070

Chairman Club Membership
**Rtn. CA Prabhatha Kumara**
Mob : 9845080970

Chairman T.R.F.
**Rtn. Suvarna Nayak R.**
Mob : 9845205256

Chairman Public Image
**Rtn. Jyothi Padmanabh**
Mob : 9019736528

Chairman Pulse Polio :
**Rtn. Dr. Kirthinath Ballal**
Mob : 9844270050

I.T. Website :
**Rtn. Rekha Upadhyaya**
Mob : 9900213535

District Project :
**Rtn. Dr. Asha P. Hegde**
Mob : 9448824967

Bulletin Editor :
**Rtn. Ganesh Salian**
Mob : 9844332536

Monthly EDITION   August 20, 2025 ISSUE - 3

## ಕಾರ್ಕಳ ವಕೀಲ ವಾಸುದೇವ ಕಾಮತ್ ರೋಟರಿ ವೃತ್ತ ಲೋಕಾರ್ಪಣೆ



ರೋಟರಿ ಕ್ಲಬ್ ಕಾರ್ಕಳ ಇವರು ಮಾಡುವ ಸಮಾಜಮುಖಿ ಕಾರ್ಯಕ್ರಮಗಳು ಶ್ಲಾಘನೀಯ. ಕಾರ್ಕಳದಲ್ಲಿ ಶೈಕ್ಷಣಿಕ ಆರೋಗ್ಯ ಮತ್ತು ಸಮುದಾಯ ಸೇವೆಗಳನ್ನು ಮಾಡಿಕೊಂಡು ಬರುತ್ತಿರುವ ರೋಟರಿ ಸಂಸ್ಥೆಯು ಎಲ್ಲರಿಗೂ ಮಾದರಿಯಾಗಿದೆ ಎಂದು ಕಾರ್ಕಳ ಕ್ಷೇತ್ರದ ಶಾಸಕರಾದ ವಿ. ಸುನಿಲ್ ಕುಮಾರ್ ಹೇಳಿದರು.ಅವರು ಕಾರ್ಕಳ ಮುಖ್ಯ ಬಸ್ಸು ನಿಲ್ದಾಣದಲ್ಲಿ ನಿರ್ಮಿಸಿದ ವಕೀಲ ವಾಸುದೇವ ಕಾಮತ್ ರೋಟರಿ ವೃತ್ತವನ್ನು ಲೋಕಾರ್ಪಣೆಗೊಳಿಸಿ ಮಾತನಾಡುತ್ತಿದ್ದರು.

ತಮ್ಮ ತಂದೆ ವಕೀಲ ವಾಸುದೇವ ಕಾಮತ್‌ರವರ ಹೆಸರಿನ ವೃತ್ತದ ನಿರ್ಮಾಣದಲ್ಲಿ ಸಹಕರಿಸಿದ ದಾನಿಗಳಾದ ಕೆ. ಕಮಲಾಕ್ಷ ಕಾಮತ್ ಲೆಕ್ಕಪರಿಶೋಧಕರು ಮಾತನಾಡುತ್ತಾ ಅಂತರಾಷ್ಟ್ರೀಯ ರೋಟರಿ ಸಂಸ್ಥೆಯ ಕೆಲಸ ಕಾರ್ಯಗಳು ಪ್ರಶಂಸಣೀಯವಾಗಿದ್ದು ಸಮಾಜಕ್ಕೆ ಇನ್ನು ಹೆಚ್ಚಿನ ಸೇವೆಯು ಲಭಿಸುವಂತಾಗಲಿ ಎಂದರು. ವೇದಿಕೆಯಲ್ಲಿ ಕಾರ್ಕಳ ಪುರಸಭಾ ಅಧ್ಯಕ್ಷರಾದ ಯೋಗೀಶ್ ದೇವಾಡಿಗ ಪುರಸಭೆಯ ಸ್ಥಳೀಯ ಸದಸ್ಯೆ ಸುಮಾ ಕೇಶವ್, ರೋಟರಿ ಜಿಲ್ಲಾ ಮಾಜಿ ಗವರ್ನರ್ ಡಾ. ಭರತೇಶ್ ಆದಿರಾಜ್, ವಲಯ ಸೇನಾನಿ ಜಾನ್ ಆರ್ ಡಿ'ಸಿಲ್ವ, ಮೇಜರ್ ಡೋನರ್ ಸುವರ್ಣ ನಾಯಕ್, ಅರುಣ್ ಪುರಾಣಿಕ್, ಕಾರ್ಯದರ್ಶಿ ಚೇತನ್ ನಾಯಕ್ ಉಪಸ್ಥಿತರಿದ್ದು ಶುಭ ಹಾರೈಸಿದರು.

## ಕಾರ್ಕಳ ರೋಟರಿಯಿಂದ ಆಮ್ಲಜನಕ ಸಾಂದ್ರೀಕರಣ ಯಂತ್ರ ಹಸ್ತಾಂತರ

ರೋಟರಿ ಸಂಸ್ಥೆಯ ಮುಖ್ಯ ಧ್ಯೇಯ ಸಮುದಾಯ ಸೇವೆಯೇ ಆಗಿರುತ್ತದೆ. ಸಮಾಜದ ಅಶಕ್ತರಿಗೆ ಸಹಾಯ ಮಾಡುವುದರಲ್ಲಿ ತೃಪ್ತಿ ಕಾಣುವ ಸಂಸ್ಥೆಯೇ ರೋಟರಿ ಎಂದು ರೋಟರಿ ಕ್ಲಬ್ ಕಾರ್ಕಳ ಇದರ ಅಧ್ಯಕ್ಷ ನವೀನ್‌ಚಂದ್ರ ಶೆಟ್ಟಿ ಹೇಳಿದರು. ಅವರು ರೋಟರಿ ಕ್ಲಬ್ ಕಾರ್ಕಳ ವತಿಯಿಂದ ಉಸಿರಾಟದ ತೊಂದರೆ ಇರುವ ವ್ಯಕ್ತಿಗೆ ಆಮ್ಲಜನಕ ಸಾಂದ್ರೀಕರಣ ಯಂತ್ರವನ್ನು ಹಸ್ತಾಂತರಿಸಿ ಮಾತನಾಡುತ್ತಿದ್ದರು. ಇದೇ ಸಂದರ್ಭದಲ್ಲಿ ರೋಟರಿಯ ಮೇಜರ್ ಡೋನರ್ ತುಕಾರಾಮ ನಾಯಕ್ ಧನ ಸಹಾಯ ಹಸ್ತಂತರ ಮಾಡಿದರು. ರೊ.ಸುವರ್ಣ ನಾಯಕ್, ರೋಟರಿ ಜಿಲ್ಲಾ ಮಾಜಿ ಗವರ್ನರ್ ಡಾ. ಭರತೇಶ್ ಆಧಿರಾಜ್, ಮೋಹನ್ ಶೆಣೈ ಎವ್ಾರ್ಳ್ಂ, ಶೈಲೇಂದ್ರ ರಾವ್, ಇಕ್ಬಾಲ್ ಅಹಮದ್, ಶೇಖರ್ ಹೆಚ್. ಅರುಣ್ ಕುಮಾರ್ ಶೆಟ್ಟಿ, ಸುರೇಶ್ ನಾಯಕ್, ಬಾಲಕೃಷ್ಣ ದೇವಾಡಿಗ, ಶ್ರೀಶ ಭಟ್, ಗಣೇಶ್ ಸಾಲಿಯಾನ್, ಕಾರ್ಯದರ್ಶಿ ಚೇತನ್ ನಾಯಕ್, ಚೇತನ್ ಕುಮಾರ್, ವಸಂತ್ ಎಂ. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಶುಭ ಹಾರೈಸಿದರು.



*Editorial .....*

It is with great pleasure that I join this esteemed and internationally renowned Rotary Club, which is doing a commendable job of uniting all people to work towards the common goal of unifying humanity under a single civilian society, as expressed in the Sanskrit phrase “Vasudhaiva Kutumbakam.” By bolstering sectors such as the environment, female empowerment, healthcare, education, and so forth, and striving to bring about positive change through specially designed programes, Rotary Club unites people from all over the world who share this vision.

According to Rotary International’s mission statement, each and every member of the club is urged to put in a lot of effort in order to succeed in the suggested projects.

*Your's in Rotary*
**Rtn. Ganesh Salian**

ROTARY INFORMATION

## Membership & New Club Development Month




August, designated as Membership and Club Development Month, is an ideal time to contemplate the numerous advantages of Rotary membership. Rotary is a worldwide network of neighbors, friends, leaders, and problem-solvers dedicated to creating a positive, enduring impact on our communities and across the globe. The pillars of Rotary's success are our united efforts in service, leadership, and fellowship.

Being a Rotarian comes with a wealth of benefits, including professional networking opportunities and avenues for personal growth. Members join a global network of 1.4 million Rotarians, which encourages connections that go beyond geographical and cultural boundaries. This diverse assembly offers a forum for idea exchange, collaborative projects, and the formation of lasting friendships. Moreover, Rotary's dedication to ethical leadership and service provides members with opportunities to enhance their leadership abilities and effect real change in their communities.

## ಕಾರ್ಕಳ ರೋಟರಿಯಿಂದ ವೈದ್ಯಕೀಯ ಧನ ಸಹಾಯ ವಿತರಣೆ



ರೋಟರಿ ಕ್ಲಬ್ ಕಾರ್ಕಳ ಇದರ ವತಿಯಿಂದ ಆರ್ಥಿಕವಾಗಿ ಹಿಂದುಳಿದಿರುವ ಕಿಡ್ನಿ ಸಮಸ್ಯೆಯಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಾರ್ಕಳ ಕುಂಟಲ್ಪಾಡಿ ನಿವಾಸಿ ಶ್ಯಾಮ್ ರವರ ವೈದ್ಯಕೀಯ ಚಿಕಿತ್ಸೆಗಾಗಿ ರೋಟರಿ ಕ್ಲಬ್ ಕಾರ್ಕಳ ಇದರ ವತಿಯಿಂದ ಆರ್ಥಿಕ ಸಹಾಯವನ್ನು ಮಾಡಲಾಯಿತು. ಕ್ಲಬ್ಬಿನ ಸದಸ್ಯರೊಂದಿಗೆ ಮನೆಗೆ ಭೇಟಿ ನೀಡಿ ರೂ.25,000 ದ ಚೆಕ್ಕನ್ನು ನೀಡಲಾಯಿತು. ಹಣವನ್ನು ಸ್ವೀಕರಿಸಿದ ಕುಟುಂಬದ ಹಿರಿಯರು ಕ್ಲಬ್ಬಿನ ಸಹಕಾರಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ರೋಟರಿ ಕ್ಲಬ್ಬಿನ ಅಧ್ಯಕ್ಷ ನವೀನ್ ಚಂದ್ರ ಶೆಟ್ಟಿ, ಕಾರ್ಯದರ್ಶಿ ಚೇತನ್ ನಾಯಕ್, ಮಾಜಿ ಸಹಾಯಕ ಗವರ್ನರ್ ಶೈಲೇಂದ್ರ ರಾವ್, ನಿಕಟ ಪೂರ್ವ ಅಧ್ಯಕ್ಷ ಇಕ್ಬಾಲ್ ಅಹಮದ್, ಸದಸ್ಯರಾದ ಶ್ರೀಶ ಭಟ್, ಪ್ರಕಾಶ್ ಪಿಂಟೋ, ಶಂಕರ್ ಕುಡ್ವ, ಸುಬ್ರಹ್ಮಣ್ಯ, ಚೇತನ್ ಕುಮಾರ್ ಉಪಸ್ಥಿತರಿದ್ದರು.




## ಸವಲತ್ತುಗಳು ಕಲಿಕೆಗೆ ಪ್ರೇರಣೆಯಾಗಲಿ.

### ನವೀನ್ ಚಂದ್ರ ಶೆಟ್ಟಿ

ದಾನಿಗಳು ನೀಡುವ ಸವಲತ್ತುಗಳು ಸದುಪಯೋಗವಾದರೆ ನೀಡಿದವರಿಗೂ ತೃಪ್ತಿಯಾಗುತ್ತದೆ. ಅವರು ನೀಡಿದ ಸವಲತ್ತುಗಳು ಕಲಿಕೆಗೆ ಪ್ರೇರಣೆಯಾಗಲಿ ಎಂದು ಕಾರ್ಕಳ ರೋಟರಿ ಕ್ಲಬ್ಬಿನ ಅಧ್ಯಕ್ಷ ನವೀನ್ ಚಂದ್ರ ಶೆಟ್ಟಿ ಹೇಳಿದರು. ಅವರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಲ್ಲಂಬಾಡಿ ಪದವು ಕಾರ್ಕಳ ಇಲ್ಲಿ ಹಳೆ ವಿದ್ಯಾರ್ಥಿ ಸಂಘ ರೋಟರಿ ಕ್ಲಬ್ ಕಾರ್ಕಳ ಮತ್ತು ದಾನಿಗಳು ನೀಡಿದ ಶಾಲಾ ಬ್ಯಾಗ್ ಮತ್ತು ಕೊಡೆ ವಿತರಣಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷೆ ಸಂಗೀತಾ ಬಿ.ಎನ್.ಮಕ್ಕಳ ಬಗ್ಗೆ ಪೋಷಕರು ಕಾಳಜಿ ವಹಿಸಿ ಕಲಿಕೆಗೆ ಪ್ರೋತ್ಸಾಹಿಸಬೇಕೆಂದು ಕಿವಿಮಾತು ಹೇಳಿದರು. ವೇದಿಕೆಯಲ್ಲಿ ಶಾಲಾ ನೂತನ ಕಟ್ಟಡ ರಚನಾ ಸಮಿತಿ ಅಧ್ಯಕ್ಷ ನವೀನ್ ನಾಯಕ್, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ರಾಜೇಶ್ ಕುಲಾಲ್,ಸ್ಥಾಪಕ ಅಧ್ಯಕ್ಷ ಸುರೇಶ ಆಚಾರ್ಯ, ಗ್ರಾಮ ಪಂಚಾಯತ್ ಸದಸ್ಯ ರಾಜೇಶ್ ಆಚಾರ್ಯ, ರೋಟರಿ ಕ್ಲಬ್ಬಿನ ಸದಸ್ಯ ವಸಂತ್ ಎಂ, ಬಾಲಕೃಷ್ಣ ದೇವಾಡಿಗ, ಅರುಣ್ ಶೆಟ್ಟಿ, ಉಪಸ್ಥಿತರಿದ್ದು ಶುಭ ಹಾರೈಸಿದರು. ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಮುಖ್ಯ ಶಿಕ್ಷಕ ನಾಗರಾಜ ಸ್ವಾಗತಿಸಿದರು.ಶಿಕ್ಷಕಿ ರಶ್ಮಿ ದೇವಾಡಿಗ ಕಾರ್ಯಕ್ರಮ ನಿರೂಪಿಸಿದರು. ವಿಜಯಲಕ್ಷ್ಮಿ ವಂದಿಸಿದರು.




## ಕಾರ್ಕಳ ಆಕ್ಯುಪ್ರೆಶರ್ ಆರೋಗ್ಯ ಶಿಬಿರ ಉದ್ಘಾಟನೆ

ರೋಗಿಯ ಆತ್ಮಸ್ಥೈರ್ಯವೇ ರೋಗಗಳ ಚಿಕಿತ್ಸೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ವೈದ್ಯರ ಯಾವುದೇ ಚಿಕಿತ್ಸೆಯು ರೋಗಿಯ ಮನೋಸ್ಥೈರ್ಯವನ್ನು ಅವಲಂಬಿಸಿದೆ ಎಂದು ರೋಟರಿ ಜಿಲ್ಲೆಯ ಮಾಜಿ ಗವರ್ನರ್ ಡಾ. ಭರತೇಶ್ ಆದಿರಾಜ್ ಹೇಳಿದರು. ಅವರು ಕಾರ್ಕಳ ಅನಂತಶಯನ ರೋಟರಿ ಬಾಲ ಭವನದಲ್ಲಿ ರೋಟರಿ ಕ್ಲಬ್ ಕಾರ್ಕಳ ಇದರ ವತಿಯಿಂದ ರಾಮ್ ಮನೋಹರ್ ಲೋಹಿಯಾ ಆರೋಗ್ಯ ಜೀವನ್ ಸಂಸ್ಥೆ ರಾಜಸ್ಥಾನ್ ಇವರ ಸಹಯೋಗದೊಂದಿಗೆ ನಡೆಯುತ್ತಿರುವ ಆಕ್ಯುಪ್ರೆಷರ್ ಆರೋಗ್ಯ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಅಧ್ಯಕ್ಷತೆಯನ್ನು ವಹಿಸಿದ ಕ್ಲಬ್ಬಿನ ಅಧ್ಯಕ್ಷರಾದ ನವೀನ್ ಚಂದ್ರ ಶೆಟ್ಟಿ ಅವರು ಮಾತನಾಡಿ ಒಂದು ವಾರ ಗಳ ಕಾಲ ನಡೆಯುವ ಈ ಶಿಬಿರದಲ್ಲಿ ಕಾರ್ಕಳದ ಜನತೆ ಪಾಲ್ಗೊಂಡು ಇದರ ಪ್ರಯೋಜನ ಸಿಗುವಂತಾಗಲಿ ಎಂದು ಶುಭ ಹಾರೈಸಿದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಸಹಾಯಕ ಗವರ್ನರ್ ವಿಘ್ನೇಶ್ ಶೆಣೈ ವಲಯ ಕಾರ್ಯದರ್ಶಿ ಅಲ್ವಿನ್ ನ್ಯಾರಿ ಪಿಂಟೋ ಉಪಸ್ಥಿತರಿದ್ದು ಶುಭ ಹಾರೈಸಿದರು. ಅಧ್ಯಕ್ಷ ನವೀನ್ ಚಂದ್ರ ಶೆಟ್ಟಿ ಸ್ವಾಗತಿಸಿದರು. ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಯ ರವೀಂದ್ರ ಕುಮಾರ್ ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವಸಂತ್ ಎಂ ಕಾರ್ಯಕ್ರಮ ನಿರೂಪಿಸಿದರು .ಕಾರ್ಯದರ್ಶಿ ಚೇತನ್ ನಾಯಕ್ ವಂದಿಸಿದರು.



## ಕಾರ್ಕಳ ರೋಟರಿಯಿಂದ ಸ್ವಾತಂತ್ರೋತ್ಸವ

ರೋಟರಿ ಕ್ಲಬ್ ಕಾರ್ಕಳ ಇದರ ವತಿಯಿಂದ 79ನೇ ಸ್ವಾತಂತ್ರ್ಯೋತ್ಸವವು ಕಾರ್ಕಳ ಸ್ವರಾಜ್ಯ ಮೈದಾನದ ಬಳಿಯ ರೋಟರಿ ಪಾರ್ಕ್ ನಲ್ಲಿ ನಡೆಯಿತು. ಹಿರಿಯ ರೊಟೇರಿಯನ್ ಸುವರ್ಣ ನಾಯಕ್ ರಾಷ್ಟ್ರ ಧ್ವಜವನ್ನು ಅರಳಿಸಿದರು. ಮುಖ್ಯ ಅತಿಥಿ ರೋಟರಿ ಜಿಲ್ಲಾ ಮಾಜಿ ಗವರ್ನರ್ ಡಾ. ಭರತೇಶ ಆದಿರಾಜ್ ಸ್ವಾತಂತ್ರೋತ್ಸವದ ಸಂದೇಶವನ್ನು ನೀಡಿದರು.

ವಲಯ ಸೇನಾನಿ ಜಾನ್ ಆರ್ ಡಿ'ಸಿಲ್ವ, ಆನ್ಸ್ ಕ್ಲಬ್ ಅಧ್ಯಕ್ಷೆ ಜಯಂತಿ ನಾಯಕ್ ರೋಟರ್ಯಾಕ್ಟ್ ಕಾರ್ಯದರ್ಶಿ ಅನ್ವಯ್ ಮತ್ತು ರೋಟರಿ ಸದಸ್ಯರು ಉಪಸ್ಥಿತರಿದ್ದರು.

ರೋಟರಿ ಕ್ಲಬ್ಬಿನ ಅಧ್ಯಕ್ಷ ನವೀನ್ ಚಂದ್ರ ಶೆಟ್ಟಿ ಸ್ವಾಗತಿಸಿದರು. ವಸಂತ್ ಎಂ. ಕಾರ್ಯಕ್ರಮ ನಿರೂಪಿಸಿದರು. ಕಾರ್ಯದರ್ಶಿ ಚೇತನ್ ನಾಯಕ್ ವಂದಿಸಿದರು.

## ಪತ್ರಿಕೆ ಮಾಹಿತಿ ವರದಿಗಾರಿಕೆ ಮಾಹಿತಿ ತರಬೇತಿ ಕಾರ್ಯಗಾರ



ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಎಂದು ಕರೆಯಲ್ಪಡುವ ಪತ್ರಿಕಾ ರಂಗ ಸಮಾಜದ ಅಂಕು ಡೊಂಕುಗಳನ್ನು ತಿದ್ದುವುದರ ಜೊತೆಗೆ ಮಾಹಿತಿ ನೀಡುತ್ತದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ನಿರಂತರ ಪತ್ರಿಕೆಯನ್ನು ಓದುವುದರಿಂದ ತಮ್ಮ ಸಾಮಾನ್ಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಪತ್ರಕರ್ತ ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಉಪಾಧ್ಯಕ್ಷ ಹೆಬ್ರಿ ಉದಯ್ ಕುಮಾರ್ ಶೆಟ್ಟಿ ಹೇಳಿದರು. ಕಾರ್ಕಳ ಕಾಬೆಟ್ಟು ಸರಕಾರಿ ಪ್ರೌಢಶಾಲೆಯಲ್ಲಿ ರೋಟರಿ ಕ್ಲಬ್ ಕಾರ್ಕಳ ನೇತೃತ್ವದಲ್ಲಿ ಕಾಬೆಟ್ಟು ಸರಕಾರಿ ಪ್ರೌಢಶಾಲೆಯ ಇಂಟರ್ಯಾಕ್ಟ್ ಕ್ಲಬ್‌ನ ಸಹಯೋಗದೊಂದಿಗೆ ನಡೆದ ಪತ್ರಿಕೆ ಮಾಹಿತಿ ಹಾಗೂ ವರದಿಗಾರಿಕೆ ತರಬೇತಿ ಕಾರ್ಯಗಾರದಲ್ಲಿ ಭಾಗವಹಿಸಿ ಮಾತನಾಡಿದರು.

## ವಿದ್ಯಾರ್ಥಿಗಳು ಬಾಲ್ಯದಲ್ಲಿಯೇ ಪರಿಸರದ ಬಗ್ಗೆ ಕಾಳಜಿ ವಹಿಸಬೇಕು

ವಿದ್ಯಾರ್ಥಿಗಳು ಬಾಲ್ಯದಲ್ಲಿಯೇ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆ ಜಾಗೃತಿ ಬಗ್ಗೆ ಕಾಳಜಿ ವಹಿಸಬೇಕು ಎಂದು ರೋಟರಿ ಕ್ಲಬ್ ಕಾರ್ಕಳ ಇದರ ಅಧ್ಯಕ್ಷ ನವೀನ್ ಚಂದ್ರ ಶೆಟ್ಟಿ ಹೇಳಿದರು. ಅವರು ಕ್ಲಬ್ಬಿನ ವತಿಯಿಂದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಲಂಬಾಡಿ ಪದವು ಕಾರ್ಕಳ ಇಲ್ಲಿ ನಡೆದ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆ ಬಗ್ಗೆ ಮಾಹಿತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ರೊ. ವಸಂತ್ ಎಂ. ಸ್ವಚ್ಛತೆ ಮತ್ತು ಪರಿಸರದ ಬಗ್ಗೆ ವಿದ್ಯಾರ್ಥಿಗಳಲ್ಲಿ ಸಂವಾದದೊಂದಿಗೆ ಸ್ವಚ್ಛತೆಯ ಪ್ರಾಮುಖ್ಯತೆ, ಪ್ಲಾಸ್ಟಿಕ್ ಪರಿಸರಕ್ಕೆ ಹೇಗೆ ಮಾರಕವಾಗಿದೆ, ಪ್ಲಾಸ್ಟಿಕ್‌ನ ಮಿತ ಬಳಕೆ ಬಗ್ಗೆ ಸಮಗ್ರ ಮಾಹಿತಿ ನೀಡಿದರು. ಸಮಾರಂಭದಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷೆ ಸಂಗೀತಾ ಬಿ.ಎನ್., ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸುರೇಶ್ ಆಚಾರ್ಯ, ಗ್ರಾಮ ಪಂಚಾಯತ್



ಸದಸ್ಯ ರಾಜೇಶ್ ಆಚಾರ್ಯ, ರೋಟರಿ ಕ್ಲಬ್ಬಿನ ಸದಸ್ಯ ಬಾಲಕೃಷ್ಣ ದೇವಾಡಿಗ, ಅರುಣ್ ಶೆಟ್ಟಿ, ಉಪಸ್ಥಿತರಿದ್ದು ಶುಭ ಹಾರೈಸಿದರು. ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಮುಖ್ಯ ಶಿಕ್ಷಕ ನಾಗರಾಜ ಸ್ವಾಗತಿಸಿದರು. ಶಿಕ್ಷಕಿ ರಶ್ಮಿ  ಕಾರ್ಯಕ್ರಮ ನಿರೂಪಿಸಿದರು. ಕ್ಲಬ್ಬಿನ ಕಾರ್ಯದರ್ಶಿ ಚೇತನ್ ನಾಯಕ್ ವಂದಿಸಿದರು.

## ಕೆ.ಎಂ.ಇ.ಎಸ್. ಇಂಟರ್ಯಾಕ್ಟ್ ಕ್ಲಬ್ ಪದಗ್ರಹಣ.

ಕೆ.ಎಂ.ಇ.ಎಸ್. ವಿದ್ಯಾಸಂಸ್ಥೆಗಳ ಪ್ರೌಢಶಾಲಾ ವಿಭಾಗದ ಇಂಟರಾಕ್ಟ್ ಕ್ಲಬ್‌ನ ಪದಗ್ರಹಣ ಕಾರ್ಯಕ್ರಮವು ಸಂಸ್ಥೆಯ ಸಭಾಂಗಣದಲ್ಲಿ ಜರುಗಿತು. ಇಂಟರಾಕ್ಟ್  ಕ್ಲಬ್‌ನ ನೂತನ ಅಧ್ಯಕ್ಷೆ ಮತ್ತು ಕಾರ್ಯದರ್ಶಿಗೆ ಪದಪ್ರದಾನ ನೆರವೇರಿಸಿ ಮಾತನಾಡಿದ ಕಾರ್ಕಳ ರೋಟರಿ ಕ್ಲಬ್ಬಿನ ಅಧ್ಯಕ್ಷ ನವೀನ್ ಚಂದ್ರ ಶೆಟ್ಟಿ, ಸೇವೆಯೇ ರೋಟರಿಯ ಮೂಲ ಉದ್ದೇಶವಾಗಿದೆ. ಸೇವೆ ಮಾಡುವುದರಿಂದ ಸಿಗುವ ಸಂತೃಪ್ತ ಭಾವನೆ ಬೇರೆ ಯಾವುದರಿಂದಲೂ




ಸಿಗಲಾರದು.ವಿದ್ಯಾರ್ಥಿಗಳು ಎಳವೆಯಲ್ಲಿಯೇ ಪರಿಸರ ಸಂರಕ್ಷಣೆ ನಾಯಕ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದರು. ಅಧ್ಯಕ್ಷತೆ ವಹಿಸಿದ ದಿತ್ಯಾ ಶೆಟ್ಟಿ ತನ್ನ ನೂತನ ತಂಡವನ್ನು ಪರಿಚಯಿಸಿ ವಾರ್ಷಿಕ ಯೋಜನೆಯನ್ನು ಪ್ರಸ್ತುತ ಪಡಿಸಿದರು.ಇಂಟರಾಕ್ಟ್ ಕ್ಲಬ್ಬಿನ ಚೇರ್ಮನ್ ಬಾಲಕೃಷ್ಣ ದೇವಾಡಿಗ ಇಂಟರಾಕ್ಟ್ ಕ್ಲಬ್ಬಿನ ಬಗ್ಗೆ ವಾಹಿತಿ ನೀಡಿದರು.ಜ್ಯೋತಿ ಪದ್ಮನಾಭ ಇಂಟರ್ಯಾಕ್ಟ್ ಕಬ್ಬಿನ ವತಿಯಿಂದ ಮಾಡಬಹುದಾದ ಸೇವಾ ಕಾರ್ಯಗಳ ಬಗ್ಗೆ ವಿವರಿಸಿದರು. ರೋಟರಿ ಕ್ಲಬ್ಬಿನ ಕಾರ್ಯದರ್ಶಿ ಚೇತನ್ ನಾಯಕ್, ಇಂಟರ್ಯಾಕ್ಟ್ ಕ್ಲಬ್ಬಿನ ಕಾರ್ಯದರ್ಶಿ ಆಷ್ವಿಯಾ, ಪ್ರಾಂಶುಪಾಲ ಬಾಲಕೃಷ್ಣ ರಾವ್, ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕಿ ಲೋಲಿಟಾ ಡಿ'ಸಿಲ್ವಾ ವೇದಿಕೆಯಲ್ಲಿ ಉಪಸ್ಥಿತರಿದ್ದು ಶುಭ ಹಾರೈಸಿದರು. ರೋಟರಿ ಸದಸ್ಯರಾದ ವಸಂತ್ ಎಂ, ಶೇಖರ್ ಹೆಚ್. ಅರುಣ್ ಶೆಟ್ಟಿ, ಜೆರಾಲ್ಡ್ ಕುಟಿನ್ಹೊ, ಚೇತನ್ ಕುಮಾರ್, ಶಶಿಧರ್ ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರು ಪ್ರಾರ್ಥಿಸಿದರು. ಪ್ರೌಢಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಸ್ವಾಗತಿಸಿದರು. ಶಿಕ್ಷಕಿ ಶ್ರುತಿ ಕಾರ್ಯಕ್ರಮ ನಿರೂಪಿಸಿದರು. ದಿಶಾ  ವಂದಿಸಿದರು.

## ಕಾರ್ಕಳ ಜ್ಞಾನಸುಧಾ ಪ.ಪೂ. ಕಾಲೇಜು: ವ್ಯಕ್ತಿತ್ವವಿಕಸನ, ಸಮ್ಮಾನ




ಬದುಕು ಆಕರ್ಷಣೆಯ ಗುಚ್ಛ ಅದರಾಚೆಗಿರುವ ಮೌಲ್ಯವನ್ನು ಅರಿತರೆ ಜೀವನ ಸ್ವಚ್ಛವಾಗಿರಲು ಸಾಧ್ಯ. ಸಮಾಜದೆದುರು ನಾವು ಏನು ಅನ್ನೋದನ್ನು ತೋರಿಸಿ ಕೊಡುವಲ್ಲಿ ತಲೆತಗ್ಗಿಸದಂತೆ ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ನಮ್ಮೊಳಗಿನ ಆತ್ಮಸಾಕ್ಷಿಯನ್ನು ಪ್ರಶ್ನಿಸಿಕೊಂಡು ಮುನ್ನಡೆದ ಪ್ರಾಮಾಣಿಕರು ಆರೋಗ್ಯವಾಗಿರುತ್ತಾರೆ ಎಂದು ಹಿಪ್ನೋಥೆರಪಿಸ್ಟ್ ಜ್ಯೋತಿ ಮಹಾದೇವ್ ಹೇಳಿದರು.

ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಕಳದ ರೋಟರಿ ಕ್ಲಬ್, ಆ್ಯನ್ಸ್ ಕ್ಲಬ್ ಹಾಗೂ ಕಾಲೇಜಿನ ಎನ್ನೆಸ್ಸೆಸ್ ಮತ್ತು ಎನ್.ಸಿ.ಸಿ. ಘಟಕದ ವತಿಯಿಂದ ನಡೆದ ಮಕ್ಕಳು ಎದುರಿಸುತ್ತಿರುವ ಮನೋಸಮಸ್ಯೆಗಳ ಕುರಿತು ರೋಟರಿ ಕ್ಲಬ್‌ನ ಅಧ್ಯಕ್ಷ ರೊ| ನವೀನ್ ಚಂದ್ರ ಶೆಟ್ಟಿ ಮಾತನಾಡಿದರು. ಇದೇ ಸಂದರ್ಭ ರೊ| ವೃಂದ ಶೆಟ್ಟಿ ಸ್ವಾಗತಿಸಿ, ಆ್ಯನ್ಸ್ ಕ್ಲಬ್ ಅಧ್ಯಕ್ಷೆ ಜಯಂತಿ ನಾಯ್ಕ ಸಂಪನ್ಮೂಲ ವ್ಯಕ್ತಿಯನ್ನು ಪರಿಚಯಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಜ್ಯೋತಿ ಮಹಾದೇವ್ ಅವರಿಗೆ ರೊ| ಸುವರ್ಣ ನಾಯಕ್ ಇವರು ಉಡಿ ತುಂಬಿಸಿ ಸನ್ಮಾನಿಸಲಾಯಿತು.

ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಕಾರ್ಯನಿರ್ವಹಣಾಧಿಕಾರಿ ದಿನೇಶ್ ಎಂ. ಕೊಡವೂರು, ಉಪ ಪ್ರಾಂಶುಪಾಲ ಸಾಹಿತ್ಯ, ಪಿ.ಆರ್.ಒ. ಜ್ಯೋತಿ ಪದ್ಮನಾಭ ಭಂಡಿ, ಎನ್ನೆಸೆಸ್ ಘಟಕಾಧಿಕಾರಿ ಶೈಲೇಶ್ ಶೆಟ್ಟಿ ಹಾಗೂ ಎನ್.ಸಿ.ಸಿ. ಲೆಫ್ಟಿನೆಂಟ್ ಮಂಜುನಾಥ್ ಉಪಸ್ಥಿತರಿದ್ದರು.

## ಕೆಸರ್ದ ಗೊಬ್ಬು

ಇರ್ವತ್ತೂರಿನ ಸಮದ್ ಖಾನ್‌ರವರ ಗದ್ದೆಯಲ್ಲಿ 'ಕೆಸರ್ದ ಗೊಬ್ಬು ಎಸಲ್ – 2', ರೋಟರಿ ಕ್ಲಬ್ ಕಾರ್ಕಳ, ರೋಟರ್ಯಾಕ್ಟ್ ಕ್ಲಬ್, ಕಾರ್ಕಳ, ರೋಟರಿ ಆ್ಯನ್ಸ್ ಕ್ಲಬ್, ಕಾರ್ಕಳ ಆರ್.ಸಿ.ಸಿ., ರೋಟರ್ಯಾಕ್ಟ್ ಕ್ಲಬ್ ಎಂ.ಪಿ.ಎಂ. ಕಾರ್ಕಳ ಇವರ ಜಂಟಿ ಆಶ್ರಯದಲ್ಲಿ ಬೆಳಗಿನಿಂದ ಸಾಯಂಕಾಲದವರೆಗೆ ನಡೆಯಿತು. ರೊ| ಉದಯ ಕೋಟ್ಯಾನ್‌ರವರ ಕಂಬಳದ ಕೋಣಗಳ ವ್ಯವಸ್ಥೆ ಮಾಡಿದರು. ಆ ಸಮಾರಂಭದಲ್ಲಿ ಕೃಷಿಕರಾದ



ತೊಂಬತ್ತು ವರ್ಷ ಪ್ರಾಯದ ಶ್ರೀ ಸಂಜೀವ ಶೆಟ್ಟಿಗಾರ್‌ರವರನ್ನು ಸನ್ಮಾನಿಸಲಾಯಿತು ಹಾಗೂ ಕಂಬಳದ ಓಟಗಾರರಾದ ಶ್ರೀ ಅನಂದ ಕೊಳಕೆ ಇರ್ವತ್ತೂರುರವರನ್ನು ಕೂಡ ಸನ್ಮಾನಿಸಲಾಯಿತು. ರೊ| ಸಮದ್ ಖಾನ್ ಹಾಗೂ ಕಂಬಳದ ಕೋಣದ ಮಾಲಿಕರಾದ ಪ್ರಸಾದ್ ಶೆಟ್ಟಿರವರನ್ನು ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ಆ್ಯನ್ಸ್ ಸದಸ್ಯರು, ರೋಟರಿ ಸದಸ್ಯರು ಹಾಗೂ ರೋಟರ್ಯಾಕ್ಟ್ ಸದಸ್ಯರು ಭಾಗವಹಿಸಿದ್ದರು.

## ಶಿರ್ಲಾಲು ಇಂಟರಾಕ್ಟ್ ಕ್ಲಬ್ ಪದಗ್ರಹಣ ಕಾರ್ಯಕ್ರಮ

ಶಿರ್ಲಾಲು ನಾಲ್ಕೂರು ನರಸಿಂಗ ರಾವ್ ಸ್ಮಾರಕ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಇಂಟರಾಕ್ಟ್ ಕ್ಲಬ್‌ನ ಪದಗ್ರಹಣ ಕಾರ್ಯಕ್ರಮ ಸಂಸ್ಥೆ ಸಭಾಂಗಣದಲ್ಲಿ ಕಾರ್ಯಕ್ರಮ ಜರಗಿತು. ಕಾರ್ಕಳ ರೋಟರಿ ಕ್ಲಬ್ ಅಧ್ಯಕ್ಷ ನವೀನ್ ಚಂದ್ರ ಶೆಟ್ಟಿ ಮಾರ್ಗದರ್ಶನ ನೀಡಿದರು. ನೂತನ ಅಧ್ಯಕ್ಷೆ ತಫಾ ಮತ್ತು ಕಾರ್ಯದರ್ಶಿ ಸುಧೀಕ್ಷಾ ಇವರಿಗೆ ಪದಪ್ರದಾನ. ನೆರವೇರಿಸಲಾಯಿತು. ಕ್ಲಬ್ ಚೇರ್ಮನ್ ಬಾಲಕೃಷ್ಣ ದೇವಾಡಿಗ ಮಾಹಿತಿ ನೀಡಿದರು. ಶಾಲಾಭಿವೃದ್ಧಿ ವಿದ್ಯಾರ್ಥಿನಿಯರು ಸಮಿತಿ ಕಾರ್ಯಾಧ್ಯಕ್ಷ ಕೆ. ಗುಣಪಾಲ ಕಡಂಬ, ರೋಟರಿ ಕ್ಲಬ್ ಕಾರ್ಯದರ್ಶಿ ಚೇತನ್ ನಾಯಕ್, ಸದಸ್ಯರಾದ ಉಪಸ್ಥಿತರಿದ್ದರು. ಶೇಖರ್ ಪ್ರಾರ್ಥಿಸಿದರು. ಪ್ರಾಂಶುಪಾಲ ಬೇಬಿ ಕೆ. ಈಶ್ವರ ಮಂಗಲ ಪ್ರಾಸ್ತಾವನೆಗೈದು, ಸ್ವಾಗತಿಸಿದರು. ಶಿಕ್ಷಕ. ಸತೀಶ್ ವಂದಿಸಿ, ಇಂಟರ್ಯಾಕ್ಟ್ ಕ್ಲಬ್ ಮಾರ್ಗದರ್ಶಿ ಶಿಕ್ಷಕ ನಾರಾಯಣ ಪೂಜಾರಿ ಎನ್. ನಿರೂಪಿಸಿದರು.